# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ

ಸಿ.ಸಿ. ನಂ.1/2024

ಪಿ.ಡಬ್ಲ್ಯೂಃ 2

ಸಿಡಬ್ಲ್ಯೂ-2

ಸಾಕ್ಷಿದಾರರ ಹೆಸರು : ಫಕಿರಪ್ಪ ತಳವಾರ

ತಂದೆಯ ಹೆಸರು : ಬಸಪ್ಪ ತಳವಾರ

ವಯಸ್ಸು : 28 ವರ್ಷ

ಉದ್ಯೋಗ : ಗಸ್ತು ಅರಣ್ಯಪಾಲಕ, ಭಾಗವತಿ ಕಚೇರಿ

ವಾಸ : ಭಾಗವತಿ, ಹಳಿಯಾಳ ತಾಲೂಕು

ದಿನಾಂಕಃ 20-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.ಸ

**ಮುಖ್ಯ ವಿಚಾರಣೆಃ ಸರಕಾರದ ಪರವಾಗಿ ಸ .ಸ. ಆ ರವರಿಂದ:**

1. ನಾನು 2018 ರಿಂದ ದಿನಾಂಕಃ 20-05-2020 ರವರೆಗೆ ಸುಂಕಸಾಳ ಶಾಖೆಯ ಮಾಸ್ತಿಕಟ್ಟಾ ವಲಯದ ಅರಣ್ಯ ರಕ್ಷಕನ್ನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ನನಗೆ ಚಾಸಾ-1 ರವರ ಪರಿಚಯವಿರುತ್ತದೆ. ಅವರು ನನ್ನ ಮೇಲಾಧಿಕಾರಿಗಳು. ಅದೇ ರೀತಿ ನನಗೂ ಚಾಸಾ-3 ರವರ ಪರಿಚಯವಿರುತ್ತದೆ. ನ್ಯಾಯಾಲಯದ ಮುಂದೆ ಇರುವ 3 ಜನ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 4 ನೇ ಆರೋಪಿಯು ಮೃತಪಟ್ಟಿರುತ್ತಾರೆ.

3. ದಿನಾಂಕ 03-11-2019 ರಂದು ರಾತ್ರಿ 2.35 ರ ಸಮಯದಲ್ಲಿ ರಾತ್ರಿ ಪಾಳಿ ಕರ್ತವ್ಯದಲ್ಲಿದ್ದಾಗ ಚಾಸಾ-5 ರವರು ನನಗೆ ದೂರವಾಣಿ ಮುಖಾಂತರ ಕರೆ ಮಾಡಿ ಸುಂಕಸಾಳ ಮುಖ್ಯ ರಸ್ತೆಯಲ್ಲಿ ಒಂದು ಕಪ್ಪು ಬಣ್ಣದ ಸ್ಕಾರ್ಪಿಯೋ ಗಾಡಿ ನಿಂತಿರುತ್ತದೆ. ಅದನ್ನು ರಾತ್ರಿಯಾಗಿದ್ದರಿಂದ ಟಾರ್ಚ್ ಲೈಟ್ ಮುಖಾಂತರ ಪರಿಶಿಲಿಸಿ ನೋಡಿದ್ದಾಗ ಯಾವುದೋ ಕಾಡು ಪ್ರಾಣಿಯ ಮಾಂಸ, ಕೂದಲು, ರಕ್ತದ ಕಲೆ ಹಾಗೂ ಕಾಡು ಜಾತಿಯ ಮರದ ಎಲೆ ಕಾಣಿಸುತ್ತದೆ ಹಾಗಾಗಿ ಅದು ಕಾಡು ಪ್ರಾಣಿಯದೆ ಮಾಂಸ ಎಂದು ಅಂದಾಜು ಮಾಡಲಾಗಿರುತ್ತದೆ ಎಂದು ಫೋನ್ ಮುಖಾಂತರ ನನಗೆ ವಿಷಯ ತಿಳಿಸಿ ಅದನ್ನು ಪರಿಶೀಲನೆ ಮಾಡಬೇಕು

ನೀವು ಕೂಡ ನನ್ನೊಂದಿಗೆ ಬನ್ನಿ ಎಂದು ಕರೆದಿರುತ್ತಾರೆ. ನಾನು ಸುಂಕಸಾಳದ ನನ್ನ ವಸತಿ ಗೃಹದಲ್ಲಿದ್ದು ನಾನು ಅವರು ಕರೆದ ಕೂಡಲೆ ತಕ್ಷಣವೆ ಸುಂಕಸಾಳ ಗ್ರಾಮ ಪಂಚಾಯತಿ ಎದುರುಗಡೆ ರಸ್ತೆಯ ಪಕ್ಕದಲ್ಲಿ ನಿಂತುಕೊಂಡಿದ ಸದ್ರಿ ವಾಹನದ ಬಳಿ ಹೋಗಿರುತ್ತೇನೆ. ನಾನು ಅಲ್ಲಿ ಹೋಗಿ ನೋಡಿದ್ದಾಗ ಚಾಸಾ-1, 5 ರಿಂದ 7 ಇದ್ದರು. ನಾನು ಕೂಡ ವಾಹನವನ್ನು ಪರಿಶೀಲನೆ ಮಾಡಿ ನೋಡಿದ್ದಾಗ ಸದ್ರಿ ವಾಹನದಲ್ಲಿ ಒಂದು ಚೀಲದಲ್ಲಿ ಮಾಂಸ ಹಾಗೂ ಅದಕ್ಕೆ ಅಂಟುಕೊಂಡಿದ ಕಾಡು ಜಾತಿಯ ಎಲೆ, ಕೂದಲು ಹಾಗೂ ರಕ್ತದ ಕಲೆಗಳು ಕಂಡು ಬಂದಿರುತ್ತದೆ. ಸದ್ರಿ ವಾಹನದಲ್ಲಿ ಯಾರು ಇರಲಿಲ್ಲ. ಆ ವಾಹನವನ್ನು ಹುಡುಕಿಕೊಂಡು ಯಾರಾದರೂ ಬರಬಹುದು ಎಂದು ನಾವುಗಳು ಅಲ್ಲಿಯೇ ಕಾಯಬೇಕು ಎಂದು ನಿರ್ಧಾರ ಮಾಡಿರುತ್ತೇವೆ. ನಂತರ ಮಹಾಜರಿಗೆ ಇಬ್ಬರು ಪಂಚರು ಬೇಕಾಗಿರುತ್ತದೆ ಎಂದು ಚಾಸಾ-1 ರವರು ಹೇಳಿರುತ್ತಾರೆ. ಅದಕ್ಕೆ ನಾನು ಮತ್ತು ನಮ್ಮ ಇನ್ನೊಂದು ಸಿಬ್ಬಂದಿ ಹೋಗಿರುತ್ತೇವೆ. ನಂತರ ಚಾಸಾ-3 ಮತ್ತು 4 ರವರನ್ನು ಕರೆದುಕೊಂಡು ಬಂದಿರುತ್ತೇವೆ. ಈ ಎಲ್ಲಾ ಪ್ರಕ್ರಿಯೇ ಮುಗಿಯಲು ಅಂದಾಜು ರಾತ್ರಿ 3 ಗಂಟೆಯಾಗಿರುತ್ತದೆ. ಗಾಡಿಯನ್ನು ಹುಡುಕಿಕೊಂಡು ಯಾರಾದರೂ ಬರಬಹುಕದು ಎಂದು ನಾವೆಲ್ಲರೂ ಪಂಚಾಯಿತಿಯ ಆವರಣದಲ್ಲಿ ಕಾಯುತ್ತಾ ಕುಳಿತುಕೊಂಡೆವು. ಅಂದಾಜು ಬೆಳಿಗ್ಗೆ 6.20 ಕ್ಕೆ ಸುಂಕಸಾಳದ ನಾರಾಯಣ ಶೆಟ್ ರವರ ಮನೆಯಿಂದ 1 ರಿಂದ 3 ನೇ ಆರೋಪಿತರು ವಾಹನ ಚಾಲಾಯಿಸಿಕೊಂಡು ಹೋಗಬೇಕೆಂದು ಬಂದಿರುತ್ತಾರೆ. ಆಗ ನಾವೆಲ್ಲರೂ ಸಿಬ್ಬಂದಿಗಳು ಅವರನ್ನು ಅಡ್ಡ ಹಾಕಿ ಹಿಡಿದಿರುತ್ತೇವೆ. ಆ ಚಾಸಾ-1 ರವರು ಬಂದಂತಹ ಆರೋಪಿತರ ಹೆಸರು ಮತ್ತು ವಿಳಾಸವನ್ನು ವಿಚಾರಣೆ ಮಾಡಿರುತ್ತಾರೆ. ಆರೋಪಿತರು ತಮ್ಮ ಹೆಸರು ಮತ್ತು ವಿಳಾಸವನ್ನು ತಿಳಿಸಿರುತ್ತಾರೆ. ನಂತರ ಮಾಂಸ ಮತ್ತು ಗಾಡಿಯನ್ನು ವಲಯ ಕಚೇರಿ ಮಾಸ್ತಿಕಟ್ಟಾ ಕ್ಕೆ ಸಾಗಿಸಿರುತ್ತೇವೆ. ನಂತರ ಸದ್ರಿ ಗಾಡಿಗೆ ಎಫ್.ಒ.ಸಿ. ಒಂದು ಉಳಿದ ಐಟಂ ಗಳಿಗೆ 2 ರಿಂದ 7 ಎಂದು ಗುರುತನ್ನು ಕೊಟ್ಟಿರುತ್ತೇವೆ. ಮೊದಲು ಪಂಚನಾಮೆಯನ್ನು ಜರುಗಿಸಿ ನಂತರದಲ್ಲಿ ಎಫ್.ಒ.ಸಿ. ನಂಬರನ್ನು ಕೊಡಲಾಗಿರುತ್ತದೆ. ಸದ್ರಿ ಪಂಚನಾಮೆಯನ್ನು ಸುಂಕಸಾಳದ ಗ್ರಾಮ ಪಂಚಾಯತಿ ಎದುರುಗಡೆ ಗಾಡಿ ನಿಂತಿರುವ ಸ್ಥಳದಲ್ಲಿ ಮಾಡಲಾಗಿದೆ. ಸದ್ರಿ ಪಂಚನಾಮೆ ಮಾಡಲು ಬೆಳಿಗ್ಗೆ 6.30 ಕ್ಕೆ ಪ್ರಾರಂಭಿಸಿ 10.30-11.00 ಗಂಟೆಯ ಅವಧಿಯಲ್ಲಿ ನಡೆಸಲಾಗಿರುತ್ತದೆ. ಸದ್ರಿ ಪಂಚನಾಮೆಯನ್ನು ನನ್ನ

ಸ್ವಹಸ್ತಕ್ಷರದಲ್ಲಿ ಬರೆದಿರುತ್ತೇನೆ. ಸಾಕ್ಷಿಗೆ ಈಗಾಗಲೇ ನಿಪಿ–2 ಅನ್ನು ತೋರಿಸಲಾಗಿದ್ದು, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–2 ಬಿ ಎಂದು ಗುರುತಿಸಲಾಯಿತು. ನಾವು ಅಮಾನತು ಪಡಿಸಿಕೊಂಡ ಪ್ರತಿಯೊಂದು ವಸ್ತುಗಳಿಗೂ ಎಫ್.ಒ.ಸಿ. ಎಂದು ನಿಶಾನೆಯನ್ನು ಕೊಟ್ಟಿರುತ್ತೇವೆ. ಅದರಲ್ಲಿ ಗಾಡಿ, ಮಾಂಸದ ಚೀಲಾ, ಕಾಟ್ರೇಜ್ ಮತ್ತು ಚರಿ ಕಾಟ್ರೇಜ್ಸ್ ಚರಿ ತುಂಬುವ ರಾಡು ಒಂದು ಹೆಡ್ ಟಾರ್ಚ್ 2 ಕೀಪೆಡ್ ಮೊಬೈಲ್ ಅನ್ನು ವಶಪಡಿಸಿಕೊಳ್ಳಲಾಯಿತು. ನಂತರ ಆರೋಪಿಯನ್ನು ವಲಯ ಕಚೇರಿಯಾದ ಮಾಸ್ತಿಕಟ್ಟಾಕ್ಕೆ ಹಾಜರುಪಡಿಸಿರುತ್ತೇವೆ. ಸದ್ರಿ ಸಂದರ್ಭದಲ್ಲಿ ಫೋಟೋವನ್ನು ತೆಗೆದಿರುತ್ತೇವೆ. ಸಾಕ್ಷಿ ಈಗಾಗಲೇ ಗುರುತಿಸಲಾಗಿರುವ ನಿಪಿ–3 ರಿಂದ 6 ಫೋಟೋಗಳನ್ನು ತೋರಿಸಲಾಗಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ಮಾಡುವ ಕಾಲಕ್ಕೆ ಆರೋಪಿತರು ಸದ್ರಿ ಕಾಡು ಕುರಿ ಮಾಂಸವನ್ನು ಯಲ್ಲಾಪುರದಿಂದ ಸುಂಕಸಾಳಕ್ಕೆ ತಂದಿರುತ್ತೇವೆ ಎಂದು ಹೇಳಿರುತ್ತಾರೆ. ಸದ್ರಿ ಕಾಡು ಕುರಿ ಮಾಂಸವನ್ನು 1 ನೇ ಆರೋಪಿಗೆ 4 ನೇ ಆರೋಪಿತರು ತಂದು ಕೊಟ್ಟಿದ್ದು ಅದನ್ನು ಬೆಯಿಸಿ ತಿಂದಿರುತ್ತೇವೆ ಎಂದು ಹೇಳಿರುತ್ತಾರೆ. ಈ ಬಗ್ಗೆ ನನ್ನನ್ನು ತನಿಖಾಧಿಕಾರಿಗಳು ವಿಚಾರಣೆ ಮಾಡಿರುತ್ತಾರೆ.

**ಈ ಹಂತದಲ್ಲಿ ಆರೋಪಿಪರ ವಕೀಲರು ಸಮಯವಕಾಶ ಕೋರಿದ್ದರಿಂದ ರೂ.600/– ಶುಲ್ಕದೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.